2018 ಕ.ತೀ.ವ 874

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ವಿಭಾಗೀಯ ವ್ಯವಸ್ಥಾಪಕರು ಮೆ॥ ನ್ಯಾಷನಲ್ ಇನ್ಸೂರೆನ್ಸ್ ಕಂ. ಲಿ., ಬೆಳಗಾಂ
–ವಿರುದ್ಧ– ಚಂದ್ರವ್ವ ಸಿದ್ಧಗೌಡ ಪಾಟೀಲ್ ಮತ್ತು ಇತರರು*

ಮೋಟಾರು ವಾಹನಗಳ ಅಧಿನಿಯಮ, 1988ರ 173(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.

2010ರ ಎಂವಿಸಿ ಸಂ.287 ಹಾಗು 288 ರಲ್ಲಿನ 2ನೇ ಪ್ರತ್ಯರ್ಜಿದಾರ ವಿಮಾಗಾರ ಕಂಪನಿಯು ಬೆಳಗಾವಿಯ ಮೊದಲ ತ್ವರಿತಗತಿಯ ನ್ಯಾಯಾಲಯ–IV ರ ಕಡತದಲ್ಲಿರುವಂತೆ ನೋಟಿನ ಎಂ.ಹೆಚ್–12/ಎಯು–4032 ನೋಂದಣಿ ಸಂಖ್ಯೆಯನ್ನು ಹೊಂದಿರುವ ಐಷೆರ್ ಸರಕು ಸಾಗಣೆ ವಾಹನದ ಚಾಲಕನು ಕಾರಣವೆಂದು ಹೇಳಲಾಗುತ್ತಿರುವ ಸಹಾಯಕ ಅಜಾಗರೂಕತೆಗೆ ಸಂಬಂಧಿಸಿದಂತೆ ನೀಡಿದ ತೀರ್ಪನ್ನು ಈ ಎರಡು ಅಪೀಲುಗಳಲ್ಲಿ ಪ್ರಶ್ನಿಸಿರುತ್ತದೆ. ಎಂ.ಎಫ್.ಎ. ಸಿಆರ್‌ಒಬಿ ಸಂ.814/2013 ರಲ್ಲಿನ ಎದುರು ಆಕ್ಷೇಪಣೆ ಎಂವಿಸಿ ಸಂ.288/2010 ರಲ್ಲಿನ ಕ್ಲೇಮುದಾರರದ್ದಾಗಿದ್ದು, ಇವರುಗಳಿಗೆ ಮೃತಳಾದ ಶ್ರೀಮತಿ ಅಂಜನಾ ಸೊಸೆ ಹಾಗೂ ಸದರಿ ಕ್ಲೇಮು ಅರ್ಜಿಯಲ್ಲಿನ ಇತರೆ ಅರ್ಜಿದಾರರ ತಾಯಿಯಾಗಿದ್ದು, ಈಕೆಯ ಸಾವಿಗೆ ಸಂಬಂಧಿಸಿದಂತೆ ಈಕೆಯ ಅತ್ತೆಯಾದ ತನಗೂ ಹಾಗು ತನ್ನ ಅಪ್ರಾಪ್ತ ವಯಸ್ಕ ಮೊಮ್ಮಕ್ಕಳ ಪರವಾಗಿಯೂ ಪರಿಹಾರವನ್ನು ಕೋರಿರುತ್ತಾಳೆ.

ಆದ್ದರಿಂದ ಈ ಎಲ್ಲಾ ಸುಳ್ಳು ವಾದಗಳನ್ನು ಬದಿಗಿರಿಸಿ, ವಾಸ್ತವಿಕ ದೃಷ್ಟಿಕೋನದೊಂದಿಗೆ ಪರಿಹಾರವನ್ನು ನಿರ್ಧರಿಸಬೇಕಾದ ಅವಶ್ಯಕತೆಯಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಕ್ಲೇಮುದಾರರು ಅತ್ತೆ ಹಾಗು ಮೂವರು ಅಪ್ರಾಪ್ತ ಮಕ್ಕಳಾಗಿರುತ್ತಾರೆ.

*ಎಂಎಫ್ಎ ಸಂ. 24722/2011 (ಎಂವಿ) ಇದರೊಂದಿಗೆ ಇತರೆ, ದಿನಾಂಕ 13ನೇ ಮಾರ್ಚ್, 2017.

ಹಾಗಾಗಿ, ಪ್ರಸ್ತುತ ಮೊಕದ್ದಮೆಯನ್ನು ಗುಣಾರ್ಹತೆಗಳ ಆಧಾರದ ಮೇಲೆ ಪರಿಗಣಿಸಬೇಕಾಗಿದ್ದು, ಮಕ್ಕಳಿಗೆ ಉಂಟಾಗಿರುವ ತುಂಬಲಾರದ ನಷ್ಟವನ್ನು ಈ ಎಲ್ಲಾ ಅಂಶಗಳಿಂದ ಸ್ವತಂತ್ರವಾಗಿ ನೋಡಬೇಕಾಗಿರುತ್ತದೆ. ಆದ್ದರಿಂದ ಆಕೆಯ ಮಾಸಿಕ ಆದಾಯವನ್ನು ಕಾಲ್ಪನಿಕವಾಗಿ 3,000/– ರೂ. ಗಳೆಂದು ತೆಗೆದುಕೊಂಡು ಪ್ರತಿಯೊಬ್ಬರಿಗೂ 1,50,000/– ರೂ. ಗಳ ಪರಿಹಾರವನ್ನು ನೀಡಿರುವುದಾಗಲೀ, ಆ ಮಕ್ಕಳ ಅಜ್ಜಿಗೆ 81,000/– ರೂ. ಗಳನ್ನು ಪರಿಹಾರವನ್ನು ನೀಡಿರುವುದಾಗಲೀ ಸೂಕ್ತವಾದುದಾಗಿರುವುದಿಲ್ಲವೆಂದು ಈ ನ್ಯಾಯಾಲಯವು ಭಾವಿಸುತ್ತದೆ. ಆದ್ದರಿಂದ ಈ ನ್ಯಾಯಾಲಯವು, ಬೆಳೆಯುವ ವಯಸ್ಸಿನಲ್ಲಿ ಮಕ್ಕಳು ತಾಯಿಯ ಪ್ರೀತಿ, ಮಾರ್ಗದರ್ಶನ ಹಾಗು ಪಾಲನೆಯನ್ನು ಕಳೆದುಕೊಂಡಿರುವುದಕ್ಕಾಗಿ ಪ್ರತಿಯೊಂದು ಮಗುವಿಗೂ 2,50,000/– ರೂ. ಗಳನ್ನು ನೀಡಿ, ನ್ಯಾಯಾಧೀಕರಣವು ಶ್ರೀಮತಿ. ಚಂದ್ರವ್ವಳಿಗೆ ಐತೀರ್ಪು ನೀಡಿದ್ದ 81,000 ರೂ. ಗಳ ಪರಿಹಾರವನ್ನು ಒಳಗೊಂಡಂತೆ 5,31,000/– ರೂ. ಮೊಬಲಗಿನ ಪರಿಹಾರವನ್ನು ಈ ಮೂಲಕ ರದ್ದುಪಡಿಸಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ, 69,000/– ರೂ. ಗಳನ್ನು ಶ್ರೀಮತಿ ಅಂಜನಾಳ ಚಿಕಿತ್ಸೆಗಾಗಿ, ಅಪಘಾತವಾದ ಸಮಯದಿಂದ ಆಕೆ ಕೊನೆಯುಸಿರೆಳೆಯುವವರೆಗೂ ವೆಚ್ಚ ಮಾಡಿರುವುದನ್ನು ಗಮನಿಸಲಾಗಿರುತ್ತದೆ. ಹಾಗಾಗಿ, ಆಕೆ ಬದುಕಿರುವಾಗ ಅಂದರೆ ಅಪಘಾತವಾದ ತರುವಾಯ ಆಕೆಯ ಕುಟುಂಬ ಖರ್ಚುಮಾಡಿರುವ ವೈದ್ಯಕೀಯ ವೆಚ್ಚಗಳನ್ನು ಸಂಪೂರ್ಣವಾಗಿ ಹಿಂತಿರುಗಿಸಬೇಕಾಗಿರುತ್ತದೆ. ಆದ್ದರಿಂದ ಪ್ರತಿ ಅಪ್ರಾಪ್ತ ಮಗುವಿಗೂ 2,50,00/– ರೂ. ಗಳ ದರದಲ್ಲಿ 7,50,000/– ರೂ.ಗಳ ಪರಿಹಾರವನ್ನು ನೀಡಲಾಗಿರುತ್ತದೆ. ಕ್ಲೇಮುದಾರರು 69,000/–ರೂ.ಗಳ ವೈದ್ಯಕೀಯ ವೆಚ್ಚಗಳನ್ನು ಹಿಂಪಡೆಯಲೂ ಸಹ ಹಕ್ಕುಳ್ಳವರಾಗಿರುತ್ತಾರೆ. ಅತ್ತೆಗೆ ಐತೀರ್ಪು ನೀಡಲಾದ ಪರಿಹಾರಕ್ಕೆ ಸಂಬಂಧಿಸಿದಂತೆ, ಹೇಳುವುದಾದರೆ, ಆಕೆ ಯಾವುದೇ ಪರಿಹಾರವನ್ನು ಪಡೆದುಕೊಳ್ಳಲು ಹಕ್ಕುಳ್ಳವಳಾಗಿರುವುದಿಲ್ಲ.

ತದನುಸಾರವಾಗಿ, ಎಂಎಫ್ಎ ಸಿಆರ್ಒಬಿ ಸಂ.814/2013 ರಲ್ಲಿನ ಪಾಟೀ ಸವಾಲುದಾರರಾಗಿರುವಂಥ ಕ್ಲೇಮುದಾರ ಸಂ.2 ರಿಂದ 4 ರವರೆಗಿನ ಕ್ಲೇಮುದಾರರು

**ಸಲ್ಲಿಸಿದ್ದ ಎದುರು ಆಕ್ಷೇಪಣೆಯನ್ನು ಅಂಗೀಕರಿಸಲಾಗಿರುತ್ತದೆ. ಎಂವಿಸಿ ಸಂ.288/ 2010 ರಲ್ಲಿನ ಕ್ಲೇಮುದಾರರಾಗಿರುವ ಪಾರ್ಟೀ ಸವಾಲುದಾರರ ಕೋರಿಕೆಯನ್ನು ಈ ಮೂಲಕ ಅಂಗೀಕರಿಸಿರುವುದಿಲ್ಲ. ಪರಿಷ್ಕೃತ ಪರಿಹಾರವು 8,19,000/- ರೂ. ಗಳಾಗಿರುತ್ತವೆ. ಪಾರ್ಟೀ ಸವಾಲಿನಲ್ಲಿ ಐತೀರ್ಪು ನೀಡಿದಂಥ ಹೆಚ್ಚಿಸಲಾದ ಪರಿಹಾರದ ಉಲ್ಲೇಖದೊಂದಿಗೆ, ಕ್ಲೇಮುದಾರರು, ಅರ್ಜಿ ಸಲ್ಲಿಸಿದ ದಿನಾಂಕದಿಂದ ಹಣ ಅವರುಗಳಿಗೆ ನೀಡುವ ದಿನಾಂಕದವರೆಗೂ ವಾರ್ಷಿಕ ಶೇ. 6ರ ಬಡ್ಡಿದರದೊಂದಿಗೆ ಸ್ವೀಕರಿಸಲು ಹಕ್ಕುಳ್ಳವರಾಗಿರುತ್ತಾರೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಎಲ್‌ಎಡಬ್ಲ್ಯೂಎಸ್ (ಎಸ್‌ಸಿ)–2015–5–26*
*ಖೇನ್ನಿ –ವಿರುದ್ಧ– ನ್ಯೂ ಇಂಡಿಯಾ ಅಷೂರೆನ್ಸ್*
*ಕಂಪನಿ ಲಿ. ಹಾಗೂ ಇತರರು* *(ಉಲ್ಲೇ 9)*

*2. 2008 (3) ಎಸ್‌ಸಿಸಿ 748*
*ಪಿ.ಒ. ಆಂಥೋನಿ –ವಿರುದ್ಧ–*
*ಕರ್ವರ್ ಸನ್ ಹಾಗೂ ಇತರರು* *(ಉಲ್ಲೇ 13)*

*3. 2008 (6) ಎಸ್‌ಸಿಸಿ 767*
*ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮ*
*ಹಾಗೂ ಮತ್ತೊಬ್ಬರು –ವಿರುದ್ಧ–*
*ಕೆ. ಹೇಮಲತಾ ಹಾಗೂ ಇತರರು* *(ಉಲ್ಲೇ 13)*

ಅರ್ಜಿದಾರರ ಪರ : ಶ್ರೀಮತಿ ಅರುಣಾ ಆರ್ ದೇಶಪಾಂಡೆ, ವಕೀಲರು;
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಹರೀಶ್ ಎಸ್ ಮೈಗೂರ್, ವಕೀಲರು;
2 ರಿಂದ 4 ಪ್ರತ್ಯರ್ಜಿದಾರರು ವಯಸ್ಕರಲ್ಲದ ಕಾರಣ 1ನೇ ಪ್ರತ್ಯರ್ಜಿದಾರರು ಪ್ರತಿನಿಧಿಸುತ್ತಾರೆ.

## ತೀರ್ಪು

**ನ್ಯಾಯಮೂರ್ತಿ ಎಸ್.ಎನ್. ಸತ್ಯನಾರಾಯಣ:**

2010ರ ಎಂವಿಸಿ ಸಂ.287 ಹಾಗೂ 288 ರಲ್ಲಿನ 2ನೇ ಪ್ರತ್ಯರ್ಜಿದಾರ ವಿಮಾಗಾರ ಕಂಪನಿಯು ಬೆಳಗಾವಿಯ ಮೊದಲ ತ್ವರಿತಗತಿಯ ನ್ಯಾಯಾಲಯ-IV ರ ಕಡತದಲ್ಲಿರುವಂತೆ ನೋಟಿನ ಎಂ.ಹೆಚ್-12/ಎಯು-4032 ನೋಂದಣಿ ಸಂಖ್ಯೆಯನ್ನು ಹೊಂದಿರುವ ಐಷೆರ್ ಸರಕು ಸಾಗಣೆ ವಾಹನದ ಚಾಲಕನು ಕಾರಣವೆಂದು ಹೇಳಲಾಗುತ್ತಿರುವ ಸಹಾಯಕ ಅಜಾಗರೂಕತೆಗೆ ಸಂಬಂಧಿಸಿದಂತೆ ನೀಡಿದ ತೀರ್ಪನ್ನು ಈ ಎರಡು ಅಪೀಲುಗಳಲ್ಲಿ ಪ್ರಶ್ನಿಸಿರುತ್ತದೆ. ಎಂ.ಎಫ್.ಎ. ಸಿಆರ್‌ಒಬಿ ಸಂ.814/2013 ರಲ್ಲಿನ ಎದುರು ಆಕ್ಷೇಪಣೆ ಎಂವಿಸಿ ಸಂ.288/2010 ರಲ್ಲಿನ ಕ್ಲೇಮುದಾರರದ್ದಾಗಿದ್ದು, ಇವರುಗಳಿಗೆ ಮೃತಳಾದ ಶ್ರೀಮತಿ ಅಂಜನಾ ಸೊಸೆ ಹಾಗೂ ಸದರಿ ಕ್ಲೇಮು ಅರ್ಜಿಯಲ್ಲಿನ ಇತರೆ ಅರ್ಜಿದಾರರ ತಾಯಿಯಾಗಿದ್ದು, ಈಕೆಯ ಸಾವಿಗೆ ಸಂಬಂಧಿಸಿದಂತೆ ಈಕೆಯ ಅತ್ತೆ ತನಗೂ ಹಾಗೂ ತನ್ನ ಅಪ್ರಾಪ್ತ ವಯಸ್ಕ ಮೊಮ್ಮಕ್ಕಳ ಪರವಾಗಿಯೂ ಪರಿಹಾರವನ್ನು ಕೋರಿರುತ್ತಾಳೆ.

2. ದಿನಾಂಕ: 30.06.2007 ರಂದು ಸುಮಾರು 23.00 ಗಂಟೆಗೆ ನೋಂದಣಿ ಸಂಖ್ಯೆ ಎಂ.ಹೆಚ್-09/ಎಸ್-1873ನ್ನು ಹೊಂದಿದ್ದ ಕಾರನ್ನು ಅದರ ಮಾಲೀಕರಾದ ದಂಡೇಶ ಪಾಟೀಲರು ತನ್ನ ಅತ್ತೆ ಶ್ರೀಮತಿ ಚಂದ್ರವ್ವ ಹಾಗು ತನ್ನ ಪತ್ನಿ ಶ್ರೀಮತಿ ಅಂಜನಾ ಹಾಗು ಪಕ್ಕದ ಮನೆಯ ಶ್ರೀಮತಿ ವಿಮಲಾ ಎಂಬುವವರನ್ನು ಕೂರಿಸಿಕೊಂಡು ಚಾಲನೆ ಮಾಡುತ್ತಿರುವಾಗ, ಕ್ಲೇಮು ನಡಾವಳಿಗಳಲ್ಲಿ 2ನೇ ಪ್ರತ್ಯರ್ಜಿದಾರ ವಿಮಾದಾರ ಕಂಪನಿಯಲ್ಲಿ ನೋಂದಣಿಯಾದ ನೋಂದಣಿ ಸಂ: ಎಂ.ಹೆಚ್-12/ಎಯು-4032 ಹೊಂದಿರುವ ಲಾರಿಯ ಜೊತೆ ಅಪಘಾತ ಸಂಭವಿಸಿರುವುದು ಈ ಅಪೀಲುಗಳು ಹಾಗು ಪಾಟೀ ಸವಾಲಿನಲ್ಲಿರುವ ಸಂಕ್ಷಿಪ್ತ ವಾಸ್ತವಾಂಶಗಳಾಗಿರುತ್ತವೆ.

3. ಅಪಘಾತ ಸಂಭವಿಸಿರುವುದರಲ್ಲಿ ಹಾಗು ಅಪಘಾತವುಂಟಾದ ಮರುದಿನ ಅಂದರೆ ದಿನಾಂಕ: 01.07.2007 ರಂದು ಈ ಕಾರಿನಲ್ಲಿ ಪಯಣಿಸುತ್ತಿದ್ದ ವಿಮಲ ಮೃತರಾಗಿರುವುದು ಹಾಗು ಕಾರನ್ನು ಚಾಲನೆ ಮಾಡುತ್ತಿದ್ದ ದಂಡೇಶನ ಪತ್ನಿ ಶ್ರೀಮತಿ ಅಂಜನಾ ಮೃತಳಾಗಿರುವುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಆ ತರುವಾಯ ಮೂರು ಕ್ಲೇಮು ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಎಂ.ವಿ.ಸಿ. ಸಂ.286/2010 ರಲ್ಲಿ ದಂಡೇಶ್ ಪಾಟೀಲ್ ತಾನು ಯಾತನೆ ಅನುಭವಿಸಿದ ಗಾಯಗಳಿಗೆ ಸಂಬಂಧಿಸಿದಂತೆ ಪರಿಹಾರವನ್ನು ಕೋರಿದರೆ, ಎಂ.ವಿ.ಸಿ ಸಂ.287/2010 ರಲ್ಲಿ ಈತನ ತಾಯಿ ಶ್ರೀಮತಿ ಚಂದ್ರವ್ವ ತನಗಾಗಿ ಪರಿಹಾರವನ್ನು ಕೋರಿದ್ದು, ಎಂ.ವಿ.ಸಿ. 288/2010 ರಲ್ಲಿ ಮೃತ ಅಂಜನಾಳ ಅತ್ತೆ ಹಾಗು ಆಕೆಯ ಮಕ್ಕಳು ಮತ್ತೊಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

4. ಈ ನಡಾವಳಿಗಳಲ್ಲಿ ವಿಮಾ ಕಂಪನಿಯು ಪರ ಮಾನ್ಯ ನ್ಯಾಯವಾದಿಗಳಿಗಾಗಲೀ ಇಲ್ಲವೇ 2010ರ 287 ಹಾಗು 288 ರಲ್ಲಿನ ಕ್ಲೇಮುದಾರರಿಗಾಗಲೀ, ಈ ಅಪಘಾತದಲ್ಲಿ ಬಲಿಯಾದ ವಿಮಲಾ ಯಾವುದೇ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾರೆಯೇ ಹಾಗು ಅದು ಏನಾಗಿದೆ ಎಂಬುದರ ಬಗ್ಗೆ ಯಾವ ವಿಚಾರವೂ ತಿಳಿದಿರುವುದಿಲ್ಲ.

5. ಪ್ರಸ್ತುತ, ಪ್ರಸ್ತಾಪಿಸಲಾಗುತ್ತಿರುವ ಅಪೀಲುಗಳ ಬಗ್ಗೆ ಹೇಳುವುದಾದರೆ, ಕ್ಲೇಮುದಾರರಿಗೆ ಪರಿಹಾರ ನೀಡಿರುವುದನ್ನು ಪ್ರಶ್ನಿಸಿ 2010ರ ಎಂ.ವಿ.ಸಿ ಸಂ.287 ಹಾಗೂ 288 ರಲ್ಲಿ 2ನೇ ಪ್ರತ್ಯರ್ಜಿದಾರರು ಈ ಎರಡೂ ಅಪೀಲುಗಳನ್ನು ಸಲ್ಲಿಸಿದ್ದು, ಅಪಘಾತದ ಸಮಯದಲ್ಲಿ ದಂಡೇಶ್ ಪಾಟೀಲ ಚಾಲನೆ ಮಾಡುತ್ತಿದ್ದಂಥ ನೋ.ಸಂ. ಎಂ.ಹೆಚ್–09/ಎಸ್–1873ನ್ನು ಹೊಂದಿರುವ ಕಾರಿನ ಚಾಲಕ, ಮಾಲೀಕ ಹಾಗು ವಿಮಾದಾರರ ಮೇಲೆ ಅಜಾಗರೂಕ ನಿರ್ಲಕ್ಷ್ಯವನ್ನು ಪರಿಗಣಿಸದಿರುವ ಕುರಿತು ಪ್ರಶ್ನಿಸಿರುತ್ತಾರೆ.

6. ಅಪೀಲುದಾರರ ಪರ ಮಾನ್ಯ ವಕೀಲರ ಹಾಗು ಪರಿಹಾರವನ್ನು ಹೆಚ್ಚಿಸಲು ಕೋರಿ ಎಂ.ವಿ.ಸಿ ಸಂ.288/2010 ರಲ್ಲಿ ಕ್ಲೇಮುದಾರರು ಸಲ್ಲಿಸಿದಂಥ ಈ ಎರಡೂ ಅಪೀಲುಗಳು ಹಾಗು ಪಾಟೀ ಸವಾಲನ್ನು ಕುರಿತಂತೆ ಪ್ರಶ್ನಿಸಿರುವ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಿರುತ್ತೇವೆ. ದಂಡೇಶ್ ಸಲ್ಲಿಸಿರುವಂಥ ಎಂ.ವಿ.ಸಿ ಸಂ.286/2010 ರಲ್ಲಿನ ಕ್ಲೇಮು ಅರ್ಜಿಯನ್ನು ಆತನ ಮರಣದಿಂದಾಗಿ ಪರಿತ್ಯಜಿಸಿರುವುದು ಕಂಡುಬಂದಿದೆ. ಇತರೆ ಎರಡು ಅರ್ಜಿಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಒಂದು ಅರ್ಜಿಯು ಚಂದ್ರವ್ವ ತನಗಾದ ಗಾಯಗಳಿಗೆ ಪರಿಹಾರವನ್ನು ಕೋರಿರುವುದಾದರೆ, ಮತ್ತೊಂದು ತನ್ನ ಸೊಸೆ ಅಂಜನಾಳ ಮರಣಕ್ಕೆ ಸಂಬಂಧಿಸಿದಂತೆ ತಾನು ಹಾಗು ತನ್ನ ಮೊಮ್ಮಕ್ಕಳು ಸಲ್ಲಿಸಿದ ಅರ್ಜಿಯಾಗಿರುತ್ತದೆ. ಚಂದ್ರವ್ವ ಎಂ.ವಿ.ಸಿ. ಸಂ.287/2010ರಲ್ಲಿ ಆಕೆಗೆ ಐತೀರ್ಪು ನೀಡಿದ ಪರಿಹಾರದ ಬಗೆಗೆ ತೃಪ್ತಿಯನ್ನು ವ್ಯಕ್ತಪಡಿಸಿರುತ್ತಾಳೆ. ಹಾಗಾಗಿ, ಪಾಟೀ ಸವಾಲು ಅಂಜನಾಳ ಮರಣಕ್ಕೆ ಸಂಬಂಧಿಸಿದಂತೆ ನೀಡಿದ ಪರಿಹಾರಕ್ಕೆ ಸಂಬಂಧಿಸಿರುತ್ತದೆ.

7. ವಿಮಾದಾರ ಕಂಪನಿಯು ಎರಡೂ ಅಪೀಲುಗಳಲ್ಲಿ ಪರಿಮಾಣವನ್ನು ಪ್ರಶ್ನಿಸಿರುವುದಿಲ್ಲ. ಆದರೆ, ಅಪಘಾತಕ್ಕೆ ಕಾರಣವಾದಂಥ ದಂಡೇಶನ ಕಡೆಯ ಸಹಾಯಕಾರಿ ನಿರ್ಲಕ್ಷ್ಯವನ್ನು ಪರಿಗಣಿಸದಿರುವ ಬಗೆಗೆ ಮಾತ್ರವೇ ಅದು ಪ್ರಶ್ನಿಸಿರುತ್ತದೆ. ಈ ವಿಚಾರವನ್ನು ಪ್ರಸ್ತಾಪಿಸಲು ಕಾರಣವೇನೆಂದರೆ, 01.07.2007 ರಂದಿನ ಫಿರ್ಯಾದಾಗಿರುವಂಥ ನಿಶಾನೆ ಪಿ.1 ರಲ್ಲಿ, ಫಿರ್ಯಾದುದಾರಳಾದ ಚಂದ್ರವ್ವ, ಆ ಒಂದು ಸಮಯದಲ್ಲಿ ತನ್ನ ಮಗ ಅತ್ಯಂತ ಅಜಾಗರೂಕತೆ ಹಾಗು ನಿರ್ಲಕ್ಷ್ಯದಿಂದ ಕಾರನ್ನು ಚಾಲನೆ ಮಾಡಿದ್ದು ಆತನ ನಿರ್ಲಕ್ಷ್ಯದಿಂದಾಗಿಯೇ ಅಪಘಾತವುಂಟಾಯಿತೆಂದು ಹೇಳಿರುತ್ತಾಳೆ.

8. ದಂಡೇಶನ ವಿರುದ್ಧ ಅಂಥ ಆಪಾದನೆಯನ್ನು ಮಾಡುವುದರೊಂದಿಗೆ, ಪೊಲೀಸರು ತನಿಖೆಯನ್ನು ತರುವಾಯ ಆತನ ವಿರುದ್ಧ ಪರಿತ್ಯಕ್ತ ಆರೋಪಪಟ್ಟಿಯನ್ನು ಸಲ್ಲಿಸಿರುತ್ತಾರೆ. ಎರಡೂ ವಾಹನಗಳ ಚಾಲಕರ ವಿರುದ್ಧ ಆರೋಪಪಟ್ಟಿಯನ್ನು ಸಲ್ಲಿಸಿದ್ದರೂ ಸಹ ಕ್ಲೇಮುದಾರರು, ಕಾರಿನ ಒಂದು ಪಾರ್ಶ್ವಕ್ಕೆ ಗುದ್ದಿದಂಥ

ಲಾರಿಯ ಮಾಲೀಕ ಹಾಗು ವಿಮಾದಾರನ ವಿರುದ್ಧ ಮಾತ್ರ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾನೆ. ವಿಷಯದ ಈ ಹಿನ್ನಲೆಯಲ್ಲಿ, ವಿಮಾದಾರರಿಂದ ಪ್ರಸ್ತಾಪಿಸಲ್ಪಟ್ಟ ವಾಸ್ತವಾಂಶಗಳೆಂದರೆ, ಎರಡು ಕ್ಲೇಮು ಅರ್ಜಿಗಳಲ್ಲಿ ಅಂದರೆ ಎಂ.ವಿ.ಸಿ ಸಂ.2010ರ 287 ಮತ್ತು 288 ಇವುಗಳಲ್ಲಿ ಪ್ರತ್ಯರ್ಜಿದಾರರಾಗಿರುವ ಕಾರಿನ ಮಾಲೀಕ ಹಾಗು ವಿಮೆದಾರರ ಗೈರುಹಾಜರಿಯಲ್ಲಿ, ಅಧೀನ ನ್ಯಾಯಾಲಯವು, ಐತೀರ್ಪು ನೀಡಬೇಕಾದ ಪರಿಹಾರವನ್ನು ಪರಿಗಣಿಸುವಾಗ, ದಾಖಲೆಯಿಂದ ಲಭ್ಯವಾದ ಸಾಕ್ಷ್ಯವನ್ನು ಆಧರಿಸಿ ದಂಡೇಶನ ಕಡೆಯಿಂದಾದ ಸಹಾಯಕಾರಿ ನಿರ್ಲಕ್ಷ್ಯವನ್ನು ಪರಿಗಣಿಸಬೇಕಾಗಿತ್ತು ಹಾಗು ಲಾರಿ ಚಾಲಕನ ವಿರುದ್ಧ ಹೊರಿಸಬಹುದಾಗಿದ್ದಂಥ ಸಹಾಯಕಾರಿ ನಿರ್ಲಕ್ಷ್ಯಕ್ಕೆ ಮತ್ತು ಅಪೀಲುದಾರ ವಿಮಾದಾರರ ಹೊಣೆಗಾರಿಕೆಯನ್ನು ನಿರ್ಬಂಧಿಸಬೇಕಾಗಿತ್ತು ಎಂಬುವುಗಳಾಗಿರುತ್ತವೆ. ಕಾರಿನ ಚಾಲಕನ ಕಡೆಯಿಂದಾದ ನಿರ್ಲಕ್ಷ್ಯದ ಉಲ್ಲೇಖದೊಂದಿಗೆ, ಇದು ಕಾರಿನ ಮಾಲೀಕ ಹಾಗು ವಿಮಾದಾರರ ವಿರುದ್ಧ ಪರಿಗಣಿಸಬೇಕಾಗಿರುತ್ತದೆ.

9. ***ಖೇನ್ಯೀ –ವಿರುದ್ಧ– ನ್ಯೂ ಇಂಡಿಯಾ ಅಷೂರೆನ್ಸ್ ಕಂಪನಿ ಲಿ. ಹಾಗು ಇತರರು***[1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠವು ನೀಡಿದ ತೀರ್ಪನ್ನು ಉದಾಹರಿಸಿ ಪ್ರತ್ಯರ್ಜಿದಾರ ಕ್ಲೇಮುದಾರರು ಈ ಅಪೀಲುಗಳನ್ನು ಪ್ರಶ್ನಿಸಿದ್ದು, ಅವುಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಎದುರು ಪರಿಗಣಿಸುವುದಕ್ಕೆ ಸಂಬಂಧಿಸಿದಂತೆ ಉದ್ಭವಿಸಿದ ಅಂಶಗಳು ಈ ಮುಂದಿನಂತಿವೆ:

1. ನ್ಯಾಯಾಧಿಕರಣವು ನೀಡಿದ ಐತೀರ್ಪಿನೊಂದಿಗೆ ನಡಾವಳಿಗಳು ಅಂತಿಮವಾಗಿ ನಿರ್ಧರಿಸಲ್ಪಟ್ಟಲ್ಲಿ ಹಾಗು ಉಚ್ಚ ನ್ಯಾಯಾಲಯವು ಇದರ ವಿರುದ್ಧದ ಅಪೀಲಿನಿಂದ ಕೆಲವು ಪ್ರಕರಣಗಳನ್ನು ವಿಲೆಮಾಡಿದರೂ, ನ್ಯಾಯಾಧೀಕರಣವು, ಅಪಕೃತ್ಯಕಾರನನ್ನು ಪಕ್ಷಕಾರನಂಥ ಯಾವುದೇ ನಂತರದ ನಡಾವಳಿಗಳನ್ನೂ ರೂಪಿಸುವುದು

1. ಎಲ್‌ಎಡಬ್ಲ್ಯೂಎಸ್ (ಎಸ್‌ಸಿ)–2015–5–26

ಅಥವಾ ಆತನ ವಿರುದ್ಧ ಕಾನೂನಾತ್ಮಕವಾಗಿ ಅನುಮತೀಯವಾಗಿಲ್ಲದ ಕ್ರಮ ಕೈಗೊಳ್ಳುವುದು ಕಾರ್ಯಾಂತ ನಿವೃತ್ತವಾಗುವುದಿಲ್ಲವೇ?

2. ಐತೀರ್ಪಿನಿಂದ ತೃಪ್ತಿ ಹೊಂದಿದಂಥ ಆದರೆ, ಅಪಘಾತಕ್ಕೆ ಹೊಣೆಯಾಗಿರುವ ವಾಹನದ ವಿವರಗಳನ್ನು ತಿಳಿಯದಂಥ ಅಪಕೃತ್ಯಕಾರನಿಗೆ ಪರಿಹಾರವೇನು?

10. ಸರ್ವೋಚ್ಚ ನ್ಯಾಯಾಲಯವು ತನ್ನ ಪರಿಗಣನೆಯಲ್ಲಿರುವಂಥ ವಿಷಯದಲ್ಲಿ ನೀಡಿದ ತೀರ್ಪಿನ ಹಿನ್ನಲೆಯಲ್ಲಿ ಪ್ರಸ್ತುತ ಪ್ರಕರಣದ ವಾಸ್ತವಾಂಶಗಳನ್ನು ಪರಿಗಣಿಸಿದ ತರುವಾಯ, ಸರ್ವೋಚ್ಚ ನ್ಯಾಯಾಲಯವು ಕಾನೂನಿನ ವಸ್ತುಸ್ಥಿತಿಯನ್ನು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

(i) ವಾಹನಗಳ ಮಾಲೀಕ, ಚಾಲಕ ಹಾಗು ವಿಮಾದಾರರು ಯಾರಾದರೂ ದಾವೆ ಹೂಡಬಹುದು ಹಾಗು ಎರಡೂ ವಾಹನಗಳ ಮಾಲೀಕ, ಚಾಲಕ ಹಾಗೂ ವಿಮಾದಾರರು ದಾವೆ ಹೂಡಬೇಕಾದ ಅವಶ್ಯಕತೆ ಇರುವುದಿಲ್ಲ. ಕ್ಲೇಮುದಾರನು ಎರಡೂ ವಾಹನಗಳ ಮಾಲೀಕ, ಚಾಲಕ ಹಾಗು ವಿಮಾದಾರ ಅಥವಾ ಅವರುಗಳಲ್ಲಿ ಒಬ್ಬ ಪಕ್ಷಕಾರನಾಗಬಹುದು.

(ii) ಅಲ್ಲಿ ಜಂಟಿ–ಅಪಕೃತ್ಯಕಾರರ ಹೊಣೆಗಾರಿಕೆಯುನ್ನು ಭಾಗವಮಾಡಲಾಗುವುದಿಲ್ಲ. ಒಂದು ವೇಳೆ ಇಬ್ಬರೂ ಅಪಕೃತ್ಯಕಾರರನ್ನು ಪಕ್ಷಕಾರರೆಂದು ಪರಿಗಣಿಸಿದಲ್ಲಿ ಹಾಗು ದಾಖಲೆ ಮೇಲೆ ಸೂಕ್ತ ಮಾಹಿತಿ ದೊರೆತಲ್ಲಿ, ತರುವಾಯ, ಹಂಚಿಕೆಯ ಪ್ರಶ್ನೆಯನ್ನು ಕ್ಲೇಮುಗಳ ನ್ಯಾಯಾಧೀಕರಣವು ಪರಿಗಣಿಸಬೇಕಾಗಿರುತ್ತದೆ. ಆದಾಗ್ಯೂ, ಕಾನೂನಿನ ಸಾಮಾನ್ಯ ತತ್ವಗಳ ಮೇಲೆ, ಜಂಟಿ ಅಪಕೃತ್ಯಕಾರರ ಅಂತರ್

ಹೊಣೆಗಾರಿಕೆಯನ್ನು ಹಂಚಿಕೆ ಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.

11. ಪ್ರಸ್ತುತ ಪ್ರಕರಣದ ಹಿನ್ನಲೆಯಲ್ಲಿ ವಿಷಯವನ್ನು ಪರಾಮರ್ಶಿಸಿದಲ್ಲಿ, ನಮಗೆ ಕಂಡುಬಂದ ಅಂಶವೆಂದರೆ, ವಾಸ್ತವವಾಗಿ, ಲಾರಿಯ ಚಾಲಕ ಸರಿಯಾದ ಸಂಕೇತ ಕೊಡದೆ ರಸ್ತೆಯ ಮಧ್ಯದಲ್ಲಿ ಬ್ರೇಕ್ ಹಾಕಿರುವುದು ಅಪಘಾತಕ್ಕೆ ಕಾರಣವಾಗಿರುವ ಸಹಾಯಕಾರಿ ನಿರ್ಲಕ್ಷ್ಯವನ್ನು ಎಸಗಿದ್ದು, ಇದು ಅಪಘಾತಕ್ಕೆ ಕಾರಣವಾಗಿರುತ್ತದೆ ಹಾಗು ಅದೇ ರೀತಿ, ಕಾರನ್ನು ಚಾಲನೆ ಮಾಡುತ್ತಿದ್ದ ಚಾಲಕ, ಚಾಲನೆಯಲ್ಲಿದ್ದ ಸದರಿ ಲಾರಿಯನ್ನು ಅನುಸರಿಸುವಾಗ ಲಾರಿಯಿಂದ ಸುರಕ್ಷಿತ ಅಂತರವನ್ನು ಕಾಯ್ದುಕೊಳ್ಳುವ ಎಚ್ಚರಿಕೆಯನ್ನು ಹಾಗು ಮುಂಜಾಗರೂಕತೆಯನ್ನು ತೆಗೆದುಕೊಳ್ಳದೆ ನಿರ್ಲಕ್ಷ್ಯ ಹಾಗು ಅಜಾಗರೂಕತೆಯಿಂದ ಅತಿವೇಗವಾಗಿ ಚಾಲನೆ ಮಾಡಿರುವುದರಿಂದ ಡಿಕ್ಕಿ ಹೊಡೆದಿರುತ್ತದೆ, ಎಂಬುದಾಗಿರುತ್ತದೆ.

12. ಈ ಹಿನ್ನಲೆಯಲ್ಲಿ, ಎರಡೂ ಅರ್ಜಿಗಳಲ್ಲಿನ ಕ್ಲೇಮುದಾರರ ಸ್ಥಿತಿಗತಿಯು ಅಜಾಗರೂಕತೆಯಿಂದಾಗಿ ಅಪಘಾತವು ಸಂಭವಿಸಿರುವುದರಿಂದ ಕಾರಿನ ಚಾಲಕ ಹಾಗು ಲಾರಿಯ ಚಾಲಕನ ಸಂಯುಕ್ತ ನಿರ್ಲಕ್ಷ್ಯಕ್ಕೆ ಸಂಬಂಧಿಸಿದಂತೆ ಅವರು ಪರಿಹಾರವನ್ನು ಕೋರುವಂತಾಗಿದೆ. ಆದ್ದರಿಂದ ಕ್ಲೇಮುದಾರರ ಕಡೆ ಯೋಚಿಸುವಾಗ, ಅವರಿಗೆ ಪರಿಹಾರವನ್ನು ಕೋರುವ ಹಕ್ಕಿದ್ದು ಎರಡೂ ವಾಹನಗಳ ಚಾಲಕರಿಗೆ ಸಂಯುಕ್ತ ನಿರ್ಲಕ್ಷ್ಯವನ್ನು ಹೊರಿಸಬಹುದಾಗಿರುತ್ತದೆ. ಪ್ರತೀ ವಾಹನದ ವಿಮಾದಾರರು ಹಾಗು ಮಾಲೀಕರ ಕಡೆ ಯೋಚಿಸುವಾಗ, ಅವರು ಪರಸ್ಪರ ಸಹಾಯಕಾರಿ ನಿರ್ಲಕ್ಷ್ಯಕ್ಕೆ ಸಂಬಂಧಿಸಿದಂತೆ ವಾದ ಮಾಡಲು ಅವರು ಮುಕ್ತರಾಗಿರುತ್ತಾರೆ. ಪ್ರಸ್ತುತ ಅಪೀಲುಗಳಲ್ಲಿನ ಕ್ಲೇಮುದಾರರು ಅಪಘಾತದಲ್ಲಿ ಒಳಗೊಂಡ ವಾಹನಗಳ ಮಾಲೀಕರಾಗಲೀ ಅಥವಾ ಚಾಲಕರಾಗಲಿ ಆಗಿರುವುದಿಲ್ಲ. ಅವರು ಅಪಘಾತಕ್ಕೆ ಕಾರಣಕರ್ತರಾಗಿರದೆ ಆದರೆ ಆ ಒಂದು ವಾಹನದಲ್ಲಿ ಪ್ರಯಾಣ ಮಾಡುತ್ತಿದ್ದ ಸಹ–ಪ್ರಯಾಣಿಕರಾಗಿರುತ್ತಾರೆ.

13. ಇದಕ್ಕೆ ಪ್ರತಿಯಾಗಿ ಎರಡೂ ವಾಹನಗಳ ಪಾಲಿನಿಂದಾದ ಸಂಯುಕ್ತ ನಿರ್ಲಕ್ಷ್ಯವು ಕ್ಲೇಮುದಾರರಲ್ಲಿ ಒಬ್ಬರಾದ ಅಂದರೆ ... ಎಂ.ವಿ.ಸಿ ಸಂ.287/2010 ರಲ್ಲಿನ ಕ್ಲೇಮುದಾರರಿಗೆ ಅಪಘಾತದಿಂದ ಗಾಯಗಳುಂಟಾಗಿದ್ದು, ಎಂ.ವಿ.ಸಿ. ಸಂ.288/ 2010 ರಲ್ಲಿನ ಮೊದಲ ಕ್ಲೇಮುದಾರರ ಸೊಸೆಯ ಮರಣ ಸಂಭವಿಸಿದ್ದು, ಮರಣ ಹೊಂದಿದ ಮಹಿಳೆ, ಸದರಿ ಕ್ಲೇಮು ಅರ್ಜಿಯಲ್ಲಿನ ಕ್ಲೇಮುದಾರ ಸಂ.2 ರಿಂದ 4ರ ವರೆಗಿನ ಕ್ಲೇಮುದಾರರ ತಾಯಿಯೂ ಆಗಿರುತ್ತಾಳೆ. ಆದ್ದರಿಂದ ಕ್ಲೇಮು ಉದ್ಭವವಾದಾಗ, ಸರ್ವೋಚ್ಚ ನ್ಯಾಯಾಲಯದ ಮೇಲೆ ಹೇಳಿದ ತೀರ್ಪಿನಲ್ಲಿ ಅಭಿಪ್ರಾಯಪಟ್ಟಂಥ ಕಾನೂನಿನ ಸ್ಥಿತಿಗತಿಯು ಈ ಅಪೀಲುಗಳಲ್ಲಿನ ವಿವಾದಕ್ಕೆ ನಿರ್ದೇಶನವನ್ನು ನೀಡುತ್ತದೆ. ತೀರ್ಪಿನ 10ನೇ ಪ್ಯಾರಾದಲ್ಲಿ ನೀಡಿದ ಅಭಿಪ್ರಾಯದ ಹಿನ್ನಲೆಯಲ್ಲಿ ***ಪಿ.ಒ. ಆಂಥೋನಿ –ವಿರುದ್ಧ– ಕರ್ವರ್ ನನ್ ಹಾಗೂ ಇತರರು***[2] ಪ್ರಕರಣದಲ್ಲಿ ಮತ್ತು ರಲ್ಲಿ ವರದಿಯಾದ ***ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಮತ್ತೊಬ್ಬರು –ವಿರುದ್ಧ– ಕೆ. ಹೇಮಲತಾ ಹಾಗೂ ಇತರರು***[3] ಪ್ರಕರಣದಲ್ಲಿ ನೀಡಿದ ತೀರ್ಪನ್ನು ಅನುಸರಿಸಿ ಕ್ಲೇಮು ಅರ್ಜಿಗಳನ್ನು ***ಖೇನ್ಯೀ –ವಿರುದ್ಧ– ನ್ಯೂ ಇಂಡಿಯಾ ಅಷೂರೆನ್ಸ್ ಕಂಪನಿ ನಿಯಮಿತ ಹಾಗು ಇತರರು*** ಪ್ರಕರಣದಲ್ಲಿ ಅಂಗೀಕರಿಸಲಾಗಿರುತ್ತದೆ.

14. ಮೇಲೆ ಹೇಳಿದ ತೀರ್ಪಿನ ಹಿನ್ನಲೆಯಲ್ಲಿ, ಈ ನ್ಯಾಯಾಲಯವು, ಎರಡೂ ವಾಹನಗಳ ಚಾಲಕರು ಕಾರಣವಾಗಿರುವ ಸಂಯುಕ್ತ ನಿರ್ಲಕ್ಷ್ಯಕ್ಕೆ ವಿಶೇಷವಾಗಿ ಅಪಕೃತ್ಯಕಾರರಲ್ಲಿ ಒಬ್ಬನ ಮೂಲಕ ಕ್ಲೇಮುದಾರರು ಕೋರುವ ಪರಿಹಾರದಲ್ಲಿ ನ್ಯಾಯಾಧೀಕರಣದ ನಿರ್ಣಯವನ್ನು ಪ್ರಶ್ನಿಸಲು ವಿಮಾದಾರರು ಮುಕ್ತವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಯಾವುದೇ ಸಂದರ್ಭದಲ್ಲಿ, ಈ ನ್ಯಾಯಾಲಯವು, ಅಪಘಾತವುಂಟಾಗಲು ಸದರಿ ವಾಹನ ಎಷ್ಟರ ಮಟ್ಟಿಗೆ ಕಾರಣವಾಗಿದೆ ಎಂಬ ಪ್ರಮಾಣಾನುಸಾರವಾದ ಅನುಪಾತವನ್ನು ಕೋರಿ ಸಂ. ಎಂ.ಎಚ್–09/ಎಸ್–1873 ನೋಂದಣಿ ಸಂಖ್ಯೆಯನ್ನು ಹೊಂದಿರುವ ಪರಿಹಾರವನ್ನು ಕೋರಲು ನೋಂದಣಿ ಸಂ. ಎಂ.ಎಚ್.12/4032ನ್ನು ಹೊಂದಿರುವ ಟ್ರಕ್‌ನ ವಿಮಾದಾರ

2. 2008 (3) ಎಸ್‌ಸಿಸಿ 748

3. 2008 (6) ಎಸ್‌ಸಿಸಿ 767

ಕಂಪನಿಯ ಮುಕ್ತವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ನೋಂದಣಿ ಸಂ. ಎಂ.ಹೆಚ್–12/4032ನ್ನು ಹೊಂದಿರುವ ಲಾರಿಯ ಅಪೀಲುದಾರ ವಿಮಾದಾರನಿಗೆ ಅಂಥ ಮುಕ್ತತೆಯನ್ನು ಮೀಸಲಿರಿಸಿ, 2011 ರ ಎಂಎಫ್ಎ ಸಂ.24721 ಹಾಗು 24722 ರಲ್ಲಿನ ಅಪೀಲುಗಳನ್ನು ಈ ಮೂಲಕ ವಜಾಗೊಳಿಸಲಾಗಿರುತ್ತದೆ.

15. ಎಂಎಫ್ಎ ಸಂ.24722/2011 ರಲ್ಲಿ ಸಲ್ಲಿಸಿದ ಎಂಎಫ್ಎ ಸಿಆರ್ಒಬಿ ಸಂ.814/2013 ರಲ್ಲಿನ ಪಾಟೀ ಸವಾಲಿಗೆ ನಮ್ಮ ಗಮನ ಹರಿಸಿದಾಗ, ಅಪಘಾತದಲ್ಲಿ ಮೃತಳಾಗಿರುವುದು ಅಂಜನಾ ಎಂಬ ಹೆಸರಿನ ಮಹಿಳೆಯಾಗಿರುತ್ತಾಳೆ. ಒಪ್ಪಿಕೊಂಡಂತೆ, ಈಕೆ ಎಂ.ಹೆಚ್–09/ಎಸ್–1873 ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಕಾರಿನ ಮಾಲೀಕ ಹಾಗು ಚಾಲಕನೂ ಆಗಿದ್ದ ದಂಡೇಶ ಪಾಟೀಲ್‌ನ ಪತ್ನಿಯಾಗಿದ್ದು ಅಪಘಾತ ನಡೆದ ವೇಳೆಯಲ್ಲಿ ತನ್ನ ಅತ್ತೆ ಹಾಗು ನೆರೆಮನೆಯಾಕೆಯೊಂದಿಗೆ ಪ್ರಯಾಣಿಸುತ್ತಿದ್ದಳು. ಕ್ಲೇಮು ಅರ್ಜಿಯಲ್ಲಿ ಈಕೆ, ಕಸೂತಿ ಹಾಕುವ ಹಾಗು ಬಟ್ಟೆ ಹೊಲೆಯುವ ಕೆಲಸ ಮಾಡುತ್ತಿದ್ದಳೆಂದು ಹೇಳಲಾಗಿರುತ್ತದೆ. ಕ್ಲೇಮು ಅರ್ಜಿಯಲ್ಲಿ ಅಂತಹ ವಾದವಿದ್ದಾಗ್ಯೂ, ದಾಖಲೆಯಲ್ಲಿ ಆಕೆ ಯಾವುದೇ ಕಸೂತಿ ಕೆಲಸವನ್ನಾಗಲೀ ಅಥವಾ ಬಟ್ಟೆ ಹೊಲೆಯುವ ಕೆಲಸವನ್ನಾಗಲೀ ಮಾಡುತ್ತಿದ್ದ ಬಗೆಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ.

16. ಸಾಮಾನ್ಯವಾಗಿ ಕೆಲವು ಸಂದರ್ಭಗಳಲ್ಲಿ ಎಲ್ಲಾ ಗೃಹಿಣಿಯರೂ ತಮ್ಮ ಉಪ–ಕಸುಬಾಗಿ ಯಾವುದಾದರೂ ವ್ಯವಹಾರವನ್ನೋ, ಬಟ್ಟೆ ಹೊಲೆಯುವ ಕಾರ್ಯವನ್ನೋ, ಹಾಲು ಮಾರಾಟ ಮಾಡುತ್ತಿರುವುದಾಗಿಯೋ, ತರಕಾರಿ ಮಾರಾಟ ಮಾಡುತ್ತಿರುವುದಾಗಿಯೋ, ಮನೆಪಾಠ ಮಾಡುತ್ತಿರುವುದಾಗಿಯೋ ಹೇಳಿಕೊಳ್ಳುತ್ತೀರುತ್ತಾರೆಂಬ ಅಂಶವನ್ನು ಈ ಸಮಯದಲ್ಲಿ ನಮೂದಿಸುವುದು ಸೂಕ್ತವಾದುದಾಗಿರುತ್ತದೆ. ವಾದಿಸಲಾದಂತೆ, ಅವರುಗಳು ನಿರ್ವಹಿಸುವ ಉಪ–ಕಸುಬಿಗೆ ಇಲ್ಲವೇ ಆದಾಯಕ್ಕೆ ಯಾವುದೇ ಆಧಾರವಿಲ್ಲದಿದ್ದಾಗ್ಯೂ ಇಂಥ ರೀತಿಯ ವೃತ್ತಿಯನ್ನು ನಿರ್ವಹಿಸುತ್ತಿದ್ದೇವೆಂದು ಹೇಳಿಕೊಳ್ಳುವುದು ಅವರಿಗೆ ಅನುಕೂಲಕರವಾಗಿಯೋ ಇರುತ್ತದೆ.

17. ವಿವರಿಸಲಾದ ಸಂದರ್ಭಗಳಲ್ಲಿ ಸಾರ್ವಜನಿಕ ಸಾರಿಗೆಯಲ್ಲಿ 10 ಜನರಿಗಿಂತ ಹೆಚ್ಚಿನ ಜನ ತೊಂದರೆಗೊಳಗಾಗಿದ್ದು, ಅವರೆಲ್ಲಾ ಮಹಿಳೆಯರೇ ಆಗಿದ್ದ ಪಕ್ಷದಲ್ಲಿ, ಅವರುಗಳಲ್ಲಿ ಕೆಲವರು ಹಾಲು ಮಾರಾಟದಲ್ಲೋ ಅಥವಾ ಬಟ್ಟೆ ಹೊಲೆಯುವುದರಲ್ಲೊ ನಿರತರಾಗಿದ್ದಲ್ಲಿ, ಗ್ರಾಮದ ಎಲ್ಲರೂ ಅದೇ ವೃತ್ತಿಗಳನ್ನು ನಿರ್ವಹಿಸುತ್ತಿದ್ದರೆ, ಅವರುಗಳಿಗೆ ಗ್ರಾಹಕರು ಯಾರಾಗಿರುತ್ತಿದ್ದರು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮೌಖಿಕ ಸಾಕ್ಷ್ಯವನ್ನಾಗಲೀ ಅಥವಾ ದಸ್ತಾವೇಜೀಯ ಸಾಕ್ಷ್ಯವನ್ನಾಗಲೀ ಬೆಂಬಲವಾಗಿ ನೀಡದೆ, ಸುಳ್ಳು ವಾದವನ್ನು ಮಂಡಿಸುವ ಮೂಲಕ ಉದಾರವಾದ ಪರಿಹಾರವನ್ನು ಖಚಿತ ಪಡಿಸಿದರೆ ಇಂದು ನಿರ್ಣಾಯಕವಾದ ನ್ಯಾಯ ನೀಡಿದ ದಿನವಾಗಿ ಬಿಡುತ್ತದೆ. ಆದ್ದರಿಂದ ಅಂಥ ವಾದಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗುವುದಿಲ್ಲ. ಆದಾಗ್ಯೂ, ಉಪ–ಕಸುಬಿನ ಬಗೆಗೆ ಆಲೋಚಿಸುವಾಗ, ಮಹಿಳೆಯನ್ನು ಒಬ್ಬ ಗೃಹಿಣಿಯಾಗಿ ಆಕೆಯ ಪಾತ್ರವನ್ನು ಪರಿಗಣಿಸುವುದು, ಆಕೆಯನ್ನು ಬಟ್ಟೆ ಹೊಲೆಯುತ್ತಿದ್ದಳೆಂದೊ, ಹಾಲು ಮಾರಾಟಮಾಡುತ್ತಿದ್ದಳೆಂದೋ, ರಸ್ತೆಯಲ್ಲಿ ತರಕಾರಿ ಮಾರಾಟಮಾಡುತ್ತಿದ್ದಳೆಂದೋ ಪರಿಗಣಿಸುವುದಕ್ಕಿಂತ ಸರಿಯಾದುದಾಗಿರುತ್ತದೆ. ವಾಸ್ತವವಾಗಿ ಇಡೀ ಗೃಹಕೃತ್ಯಗಳು ಆಕೆಯನ್ನೇ ಸಂಪೂರ್ಣವಾಗಿ ಅವಲಂಭಿಸಿರುತ್ತವೆ.

18. ಆದ್ದರಿಂದ ಈ ಎಲ್ಲಾ ಸುಳ್ಳು ವಾದಗಳನ್ನು ಬದಿಗಿರಿಸಿ, ವಾಸ್ತವಿಕ ದೃಷ್ಟಿಕೋನದೊಂದಿಗೆ ಪರಿಹಾರವನ್ನು ನಿರ್ಧರಿಸಬೇಕಾದ ಅವಶ್ಯಕತೆಯಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಕ್ಲೇಮುದಾರರು ಅತ್ತೆ ಹಾಗು ಮೂವರು ಅಪ್ರಾಪ್ತ ಮಕ್ಕಳಾಗಿರುತ್ತಾರೆ.

19. ಪ್ರಸ್ತುತ ಪ್ರಕರಣದಲ್ಲಿ 2 ರಿಂದ 4 ರವರೆಗಿನ ಕ್ಲೇಮುದಾರರ ವಯಸ್ಸು ಕ್ರಮವಾಗಿ 13, 11 ಹಾಗು 10 ಆಗಿರುತ್ತದೆ. ಒಪ್ಪಿಕೊಂಡಂತೆ ಎಲ್ಲಾ ಮೂವರು ಮಕ್ಕಳೂ ಹೆಣ್ಣು ಮಕ್ಕಳಾಗಿರುತ್ತಾರೆ. ಇವರೆಲ್ಲರೂ ಈಗ ಬೆಳೆಯುತ್ತಿರುವ ಮಕ್ಕಳಾಗಿದ್ದು, ಈ ವಯಸ್ಸಿನಲ್ಲಿ ಅವರಿಗೆ ತಾಯಿ ಕೇವಲ ಊಟ ನೀಡುವ ಅಥವಾ ಸೂರನ್ನು ಒದಗಿಸುವ ವ್ಯಕ್ತಿ ಮಾತ್ರ ಆಗಿರುವುದಿಲ್ಲ. ಈಕೆ ಒಂದು

ವಯಸ್ಸಿನವರೆಗೂ ಒಬ್ಬ ಗೆಳತಿ, ಶಿಕ್ಷಕಿ ಹಾಗು ಮಾರ್ಗದರ್ಶಕಿಯಾಗಿರುತ್ತಾಳೆ. ಈ ವಯೋಮಾನದ ಮಕ್ಕಳಿಗೆ ಅವಳು ಇಲ್ಲದಿರುವುದು ತುಂಬಲಾಗದ ನಷ್ಟವಾಗಿದ್ದು, ಅದನ್ನು, ಬಟ್ಟೆ ಹೊಲೆಯುವಳೆಂದೊ, ಹಾಲು ಮಾರಾಟ ಮಾಡುವಳೆಂದೊ, ತರಕಾರಿ ಮಾರಾಟಗಾರಳೆಂದೊ ಅಥವಾ ಮನೆಪಾಠ ಮಾಡುತ್ತಿದ್ದ ವ್ಯಕ್ತಿಯೆಂದೊ ಒಂದು ಅಂದಾಜು ಲೆಕ್ಕಮಾಡಿ 'ಎಕ್ಸ್‌ವೈಜ಼ಡ್' ಎಂಬ ಕಾಲ್ಪನಿಕ ಹಣವನ್ನು ನೀಡುವುದರಿಂದ ತುಂಬಿಬಿಡಲು ಸಾಧ್ಯವಿರುವುದಿಲ್ಲ.

20. ಹಾಗಾಗಿ, ಪ್ರಸ್ತುತ ಮೊಕದ್ದಮೆಯನ್ನು ಗುಣಾರ್ಹತೆಗಳ ಆಧಾರದ ಮೇಲೆ ಪರಿಗಣಿಸಬೇಕಾಗಿದ್ದು, ಮಕ್ಕಳಿಗೆ ಉಂಟಾಗಿರುವ ತುಂಬಲಾರದ ನಷ್ಟವನ್ನು ಈ ಎಲ್ಲಾ ಅಂಶಗಳಿಂದ ಸ್ವತಂತ್ರವಾಗಿ ನೋಡಬೇಕಾಗಿರುತ್ತದೆ. ಆದ್ದರಿಂದ ಆಕೆಯ ಮಾಸಿಕ ಆದಾಯವನ್ನು ಕಾಲ್ಪನಿಕವಾಗಿ 3,000/– ರೂ. ಗಳೆಂದು ತೆಗೆದುಕೊಂಡು ಪ್ರತಿಯೊಬ್ಬರಿಗೂ 1,50,000/– ರೂ. ಗಳ ಪರಿಹಾರವನ್ನು ನೀಡಿರುವುದಾಗಲೀ, ಆ ಮಕ್ಕಳ ಅಜ್ಜಿಗೆ 81,000/– ರೂ. ಗಳನ್ನು ಪರಿಹಾರವನ್ನು ನೀಡಿರುವುದಾಗಲೀ ಸೂಕ್ತವಾದುದಾಗಿರುವುದಿಲ್ಲವೆಂದು ಈ ನ್ಯಾಯಾಲಯವು ಭಾವಿಸುತ್ತದೆ. ಆದ್ದರಿಂದ ಈ ನ್ಯಾಯಾಲಯವು, ಬೆಳೆಯುವ ವಯಸ್ಸಿನಲ್ಲಿ ಮಕ್ಕಳು ತಾಯಿಯ ಪ್ರೀತಿ, ಮಾರ್ಗದರ್ಶನ ಹಾಗು ಪಾಲನೆಯನ್ನು ಕಳೆದುಕೊಂಡಿರುವುದಕ್ಕಾಗಿ ಪ್ರತಿಯೊಂದು ಮಗುವಿಗೂ 2,50,000/– ರೂ. ಗಳನ್ನು ನೀಡಿ, ನ್ಯಾಯಾಧೀಕರಣವು ಶ್ರೀಮತಿ. ಚಂದ್ರವ್ವಳಿಗೆ ಐತೀರ್ಪು ನೀಡಿದ್ದ 81,000 ರೂ. ಗಳ ಪರಿಹಾರವನ್ನು ಒಳಗೊಂಡಂತೆ 5,31,000/– ರೂ. ಮೊಬಲಗಿನ ಪರಿಹಾರವನ್ನು ಈ ಮೂಲಕ ರದ್ದುಪಡಿಸಿರುತ್ತದೆ.

21. ಪ್ರಸ್ತುತ ಪ್ರಕರಣದಲ್ಲಿ, 69,000/– ರೂ. ಗಳನ್ನು ಶ್ರೀಮತಿ ಅಂಜನಾಳ ಚಿಕಿತ್ಸೆಗಾಗಿ, ಅಪಘಾತವಾದ ಸಮಯದಿಂದ ಆಕೆ ಕೊನೆಯುಸಿರೆಳೆಯುವವರೆಗೂ ವೆಚ್ಚ ಮಾಡಿರುವುದನ್ನು ಗಮನಿಸಲಾಗಿರುತ್ತದೆ. ಹಾಗಾಗಿ, ಆಕೆ ಬದುಕಿರುವಾಗ ಅಂದರೆ ಅಪಘಾತವಾದ ತರುವಾಯ ಆಕೆಯ ಕುಟುಂಬ ಖರ್ಚುಮಾಡಿರುವ ವೈದ್ಯಕೀಯ ವೆಚ್ಚಗಳನ್ನು ಸಂಪೂರ್ಣವಾಗಿ ಹಿಂತಿರುಗಿಸಬೇಕಾಗಿರುತ್ತದೆ. ಆದ್ದರಿಂದ

ಪ್ರತಿ ಅಪ್ರಾಪ್ತ ಮಗುವಿಗೂ 2,50,000/– ರೂ. ಗಳ ದರದಲ್ಲಿ 7,50,000/– ರೂ.ಗಳ ಪರಿಹಾರವನ್ನು ನೀಡಲಾಗಿರುತ್ತದೆ. ಕ್ಲೇಮುದಾರರು 69,000/–ರೂ.ಗಳ ವೈದ್ಯಕೀಯ ವೆಚ್ಚಗಳನ್ನು ಹಿಂಪಡೆಯಲೂ ಸಹ ಹಕ್ಕುಳ್ಳವರಾಗಿರುತ್ತಾರೆ. ಅತ್ತೆಗೆ ಐತೀರ್ಪು ನೀಡಲಾದ ಪರಿಹಾರಕ್ಕೆ ಸಂಬಂಧಿಸಿದಂತೆ, ಹೇಳುವುದಾದರೆ, ಆಕೆ ಯಾವುದೇ ಪರಿಹಾರವನ್ನು ಪಡೆದುಕೊಳ್ಳಲು ಹಕ್ಕುಳ್ಳವಳಾಗಿರುವುದಿಲ್ಲ.

22. ತದನುಸಾರವಾಗಿ, ಎಂಎಫ್ಎ ಸಿಆರ್ಒಬಿ ಸಂ.814/2013 ರಲ್ಲಿನ ಪಾಟೀ ಸವಾಲುದಾರರಾಗಿರುವಂಥ ಕ್ಲೇಮುದಾರ ಸಂ.2 ರಿಂದ 4 ರವರೆಗಿನ ಕ್ಲೇಮುದಾರರು ಸಲ್ಲಿಸಿದ್ದ ಎದುರು ಆಕ್ಷೇಪಣೆಯನ್ನು ಅಂಗೀಕರಿಸಲಾಗಿರುತ್ತದೆ. ಎಂವಿಸಿ ಸಂ.288/ 2010 ರಲ್ಲಿನ ಕ್ಲೇಮುದಾರರಾಗಿರುವ ಪಾಟೀ ಸವಾಲುದಾರರ ಕೋರಿಕೆಯನ್ನು ಈ ಮೂಲಕ ಅಂಗೀಕರಿಸಿರುವುದಿಲ್ಲ. ಪರಿಷ್ಕೃತ ಪರಿಹಾರವು 8,19,000/–ರೂ. ಗಳಾಗಿರುತ್ತವೆ. ಪಾಟೀ ಸವಾಲಿನಲ್ಲಿ ಐತೀರ್ಪು ನೀಡಿದಂಥ ಹೆಚ್ಚಿಸಲಾದ ಪರಿಹಾರದ ಉಲ್ಲೇಖದೊಂದಿಗೆ, ಕ್ಲೇಮುದಾರರು, ಅರ್ಜಿ ಸಲ್ಲಿಸಿದ ದಿನಾಂಕದಿಂದ ಹಣ ಅವರುಗಳಿಗೆ ನೀಡುವ ದಿನಾಂಕದವರೆಗೂ ವಾರ್ಷಿಕ ಶೇ. 6ರ ಬಡ್ಡಿದರದೊಂದಿಗೆ ಸ್ವೀಕರಿಸಲು ಹಕ್ಕುಳ್ಳವರಾಗಿರುತ್ತಾರೆ.

23. ಅಪೀಲುಗಳು ಹಾಗು ಎದುರು ಆಕ್ಷೇಪಣೆಗಳು ವಿಲೆಯಾಗಿರುವ ಹಿನ್ನಲೆಯಲ್ಲಿ, ಠೇವಣಿಯಲ್ಲಿನ ಮೊಬಲಗನ್ನು ಬಟವಾಡೆಗೆ ಸಂಬಂದಿಸಿದಂತೆ ನ್ಯಾಯಾಧೀಕರಣಕ್ಕೆ ವರ್ಗಾವಣೆ ಮಾಡಬೇಕೆಂದು ಆದೇಶಿಸಲಾಗಿರುತ್ತದೆ.